ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ:ಹೆಚ್.ಆರ್.ಎಂ.ಎಸ್.ಸುತ್ತೋಲೆ–1/2017–18 ದಿನಾಂಕ:13.11.2017

## ನೆನಪೋಲೆ

ವಿಷಯ: Paybill ಮತ್ತು Arrears bill ಗಳನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಬಿಲ್ಲನ್ನು ಪರಿಶೀಲಿಸದೆ ಅಪ್ರೂವ್ ಮಾಡಿಕೊಂಡು ರಿವರ್ಟ್‌ಗೆ ಆನ್‌ಲೈನ್ ರಿಕ್ವೆಸ್ಟ್ ನೀಡುತ್ತಿರುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಪತ್ರ ದಿನಾಂಕ:03.10.2017

2. ಈ ಕಛೇರಿ ಜ್ಞಾಪನ ಪತ್ರ ದಿನಾಂಕ:01.09.2016.

&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವೇತನ ಬಟವಾಡೆ ಅಧಿಕಾರಿಗಳು ವೇತನ ಬಿಲ್ಲನ್ನು ಜನರೇಟ್ ಮಾಡುವ ಸಂದರ್ಭದಲ್ಲಿ ಡ್ರಾಫ್ಟ್ ಬಿಲ್ಲನ್ನು ಪರಿಶೀಲಿಸದೆ ಅಂತಿಮ ವೇತನ ಬಿಲ್ಲನ್ನು ಸೆಳೆಯುತ್ತಿರುವುದರಿಂದ, ಕೆಲವು ಬಿಲ್ಲುಗಳು ತಪ್ಪಾಗಿ ಜನರೇಟ್ ಆಗುತ್ತಿವೆ. ಉಲ್ಲೇಖಿತ ಪತ್ರಗಳಲ್ಲಿ ಈಗಾಗಲೇ ತಿಳಿಸಿದಂತೆ ಹಲವಾರು ಬಾರಿ ಸಲಹೆ ಸೂಚನೆಗಳನ್ನು ನೀಡಲಾಗಿದ್ದರೂ ಸಹ ಕೆಲವು ಬಟವಾಡೆ ಅಧಿಕಾರಿಗಳು ಕ್ರಮ ವಹಿಸದೇ ತಪ್ಪಾಗಿ ಅಪ್ರೂವ್ ಆಗಿರುವ ಬಿಲ್ಲುಗಳನ್ನು ರಿವರ್ಟ್ ಮಾಡಲು ಆನ್‌ಲೈನ್ ರಿಕ್ವೆಸ್ಟ್ ನೀಡುತ್ತಿರುತ್ತಾರೆ.

ಅಕ್ಟೋಬರ್ 2017ರಲ್ಲಿ ಸುಮಾರು 300ಕ್ಕೂ ಹೆಚ್ಚು ಡಿಡಿಓಗಳು ಆನ್‌ಲೈನ್ ರಿಕ್ವೆಸ್ಟ್ ನೀಡಿರುವುದು ಕಂಡು ಬಂದಿದ್ದು ಬಿಲ್ ಅಪ್ರೂವ್ ಮಾಡುವ ಮೊದಲು ಡ್ರಾಫ್ಟ್ ಬಿಲ್ಲನ್ನು ಸರಿಯಾಗಿ ಪರಿಶೀಲಿಸಿ ಮತ್ತು ಟೋಕನ್ ಸಂಖ್ಯೆಯನ್ನು ಖಚಿತಪಡಿಸಿಕೊಂಡು ನಂತರ ಬಿಲ್ ಅಪ್ರೂವ್ ಮಾಡಿಕೊಳ್ಳುವಂತೆ ನೆನಪೋಲೆಯ ಮೂಲಕ ಮತ್ತೊಮ್ಮೆ ಗಮನಕ್ಕೆ ತರುತ್ತಾ, ಇದಕ್ಕೆ ಡಿಡಿಓಗಳೇ ನೇರ ಹೊಣೆಗಾರರಾಗಿರುತ್ತಾರೆ.

ಆದ ಕಾರಣ ಅಕ್ಟೋಬರ್–2017ರ ಮಾಹೆಯ ನಂತರ ಸಕಾರಣವಿಲ್ಲದೆ ಪೇ ಬಿಲ್ ರಿವರ್ಟ್ ರಿಕ್ವೆಸ್ಟ್ ಸಲ್ಲಿಸುವ ವೇತನ ಬಟವಾಡೆ ಅಧಿಕಾರಿಗಳಿಗೆ ಉಲ್ಲೇಖ(1)ರಲ್ಲಿ ಈಗಾಗಲೇ ತಿಳಿಸಿದಂತೆ ಕಾರಣ ಕೇಳುವ ನೋಟೀಸ್ ಜಾರಿ ಮಾಡುವ ಮೂಲಕ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂಬ ಅಂಶವನ್ನು ಮತ್ತೊಮ್ಮೆ ತಿಳಿಯಪಡಿಸಿದೆ.

[ಎಸ್. ಕಾತ್ಯಾಯನಿದೇವಿ]
ಜಂಟಿ ನಿರ್ದೇಶಕರು [ಆಡಳಿತ]

ಗೆ:

1. ರಾಜ್ಯ ಯೋಜನಾ ನಿರ್ದೇಶಕರು, ಸ.ಶಿ.ಅ, ಬೆಂಗಳೂರು ಇವರಿಗೆ ವಂದನೆಗಳೊಂದಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಅಪರ ಆಯುಕ್ತರು, ಸಾಶಿಇ, ಧಾರವಾಡ/ಕಲಬುರಗಿ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ನಿರ್ದೇಶಕರು, ಕೆ.ಎಸ್.ಇ.ಇ.ಬಿ. ಬೆಂಗಳೂರು ಇವರಿಗೆ ಅಗತ್ಯ ಕ್ರಮಕ್ಕಾಗಿ.
4. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷೆಗಳು, ಬೆಂಗಳೂರು ಇವರಿಗೆ ಅಗತ್ಯ ಕ್ರಮಕ್ಕಾಗಿ.
5. ಜಂಟಿ ನಿರ್ದೇಶಕರು (ಮಧ್ಯಾಹ್ನ ಉಪಹಾರ ಯೋಜನೆ) ಇವರಿಗೆ ಅಗತ್ಯ ಕ್ರಮಕ್ಕಾಗಿ.
6. ಸಹಾಯಕ ನಿರ್ದೇಶಕರು(ಕೇಂದ್ರ ಸ್ಥಾನ) ಸಾಶಿಇ, ಆಯುಕ್ತರ ಕಛೇರಿ, ಬೆಂಗಳೂರು–1 ಅಗತ್ಯ ಕ್ರಮಕ್ಕಾಗಿ.
7. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
8. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
9. ಪ್ರೌಢಶಾಲಾ ಮುಖ್ಯ ಶಿಕ್ಷಕರುಗಳಿಗೆ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರ ಮುಖಾಂತರ ಅಗತ್ಯ ಕ್ರಮಕ್ಕಾಗಿ.

\\10.96.135.110\shared file\sai ram\64_17.doc